ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 5, Mar-Apr, 2023, Pp. 70-72.**
**©*IIMRD*, Mysuru**
IIMRD JOURNALS

**www.iimrd.com**

# ಮೊಹರಂ ಆಚರಣೆಯಲ್ಲಿ ಪರಧರ್ಮ ಸಹಿಷ್ಣುತೆ

**ಮಕ್ಬೂಲ್ ಪಾಶಾ ಮಹ್ಮದ್***

*ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ: (Abstract)***

*ಪ್ರಪಂಚದಲ್ಲಿ ಹಲವಾರು ಧರ್ಮಗಳಿವೆ. ಹಿಂದೂ, ಮುಸ್ಲಿಂ, ಜೈನ, ಬೌದ್ಧ, ಪಾರಸಿ, ಸಿಖ್ಖ್, ಮುಂತಾದವು ಎಲ್ಲಾ ಧರ್ಮಗಳ ಸಾರ ಒಂದೇ ಮಾನವ ಏಳಿಗೆ ಮತ್ತು ಮೌಲ್ಯಯುತ ಬದುಕು ನಡೆಸುವುದು ಇಂತಹ ಧರ್ಮಗಳಲ್ಲಿ ಅನೇಕ ಆಚರಣೆಗಳು ಇರುವುದನ್ನು ಸಹಜವಾಗಿ ನಾವು ಕಾಣುತ್ತೇವೆ. ಭಾರತ ದೇಶದಲ್ಲಿರುವ ಧರ್ಮಗಳಲ್ಲಿ ಆಚಾರ–ವಿಚಾರ ಸಂಸ್ಕೃತಿ, ಸಂಯಮ, ಶಿಸ್ತು ಇನ್ನೂ ಅನೇಕ ಮೌಲ್ಯಗಳು ಹೇಳಿಕೊಡುವ ಧರ್ಮಗಳಿವೆ. ಈ ಧರ್ಮಗಳಲ್ಲಿರುವ ಆಚರಣೆಗಳು, ಹಬ್ಬ–ಹರಿದಿನಗಳು ಉತ್ಸಹಗಳು ಎಲ್ಲಾ ಜಾತಿ, ಧರ್ಮ–ವರ್ಗ–ವರ್ಣದವರನ್ನು ಒಂದುಗೂಡಿಸಿ ನಾವೆಲ್ಲರೂ ಒಂದೇ ಎಂಬ ಐಕ್ಯ ಭಾವನೆ ಮೂಡಿಸುವಂತೆ ಮಾಡುತ್ತವೆ. ಪ್ರಸ್ತುತ ಲೇಖನದಲ್ಲಿ ಮೋಹರಂ ಆಚರಣೆಯಲ್ಲಿ ಪರಧರ್ಮ ಸಹಿಷ್ಣತೆಯ ಬಗ್ಗೆ ವಿವರಿಸಲಾಗಿದೆ.*

***ಮುಖ್ಯಪದಗಳು: (Keywords)*** *ಧರ್ಮ, ಸಂಸ್ಕೃತಿ, ಹಬ್ಬಗಳು, ಮೋಹರಂ ಆಚರಣೆ, ಸಹಿಷ್ಣತೆ.*

**ಪೀಠಿಕೆ**

ಭಾರತೀಯ ಸಮಾಜದಲ್ಲಿ ಅನೇಕ ಹಬ್ಬ–ಹರಿದಿನಗಳು ಕಾಣುತ್ತೆವೆ ಭಾರತ ವೈವಿಧ್ಯತೆಯಲ್ಲಿ ಏಕತೆ ಹೊಂದಿರುವ ದೇಶ ಹಾಗಾಗಿ ಇಲ್ಲಿ ದೇಶದ ಸಂವಿಧಾನವು ಅವರವರ ಮತ–ಧರ್ಮಗಳ ಆಚರಣೆಗೆ ಮುಕ್ತ ಅವಕಾಶ ನೀಡಲಾಗಿದೆ. ಹಾಗಾಗಿ ಇಲ್ಲಿ ದೀಪಾವಳಿ ಯುಗಾದಿ, ಹೋಳಿ ಹಬ್ಬ ಸಂಕ್ರಾಂತಿ, ರಂಜಾನ್, ಬಕ್ರಿದ್, ಇದ್–ಮಿಲಾದ್, ಆಚರಣೆಗಳು ಆಚರಿಸುವುದನ್ನು ಕಾಣುತ್ತೇವೆ. ಮುಖ್ಯವಾಗಿ ಇಲ್ಲಿ ಮೊಹರಂ ಆಚರಣೆಯ ಕುರಿತು ಹೇಳುವುದಾದರೆ ಈ ಒಂದು ಭಾರತದಲ್ಲಿ ಬಹಳ ವಿಭಿನ್ನವಾದ ಆಚಾರಣೆಯಾಗಿ ಆಚಾರಿಸುತ್ತಿರುವುದನ್ನು ನಾವು ಕಾಣುತ್ತೇವೆ. ಕಾರಣ ಇಲ್ಲಿ ಹಿಂದೂ–ಮುಸ್ಲಿಂರೆನ್ನುವ ಬೇಧ–ಭಾವವಿರದೆ ಎಲ್ಲರೂ ಮೊಹರಂ ಆಚಾರಣೆಯಲ್ಲಿ ಭಕ್ತಿ–ಭಾವದಿಂದ ತೊಡಗಿ ಆಚಾರಿಸುವುದನ್ನು ನೋಡಿದರೆ ಭಾವೈಕ್ಯತೆಯ ನೆಲೆಯಲ್ಲಿ ಮಾನವೀಯ ನೆಲೆಯಲ್ಲಿ ಮೊಹರಂ ಹಬ್ಬ ಒಂದು ವಿಭಿನ್ನ ಆಚರಣೆಯ ಹಬ್ಬವಾಗಿ ನಮಗೆ ಕಾಣುತ್ತದೆ.

*Please cite this article as: ಮಕ್ಬೂಲ್ ಪಾಶಾ ಮಹ್ಮದ್.* (2023). ಮೊಹರಂ ಆಚರಣೆಯಲ್ಲಿ ಪರಧರ್ಮ ಸಹಿಷ್ಣುತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 70–72.*

ಮೊಹರಂ ಆಚರಣೆಯಲ್ಲಿ ಪರಧರ್ಮ ಸಹಿಷ್ಣುತೆ ಮೊಹರಂ ಹಬ್ಬದ ಆರಂಭದಿಂದ ಹಿರಿಮೆ ಕೊನೆಯ ದಿನದವರೆಗಿನ ಎಲ್ಲಾ ನಿಯಮಗಳನ್ನು ಪಾಲಿಸುತ್ತಾ ವಿವಿಧ ಜಾತಿಯ ಜನರು ಆಚರಿಸುವುದು ಬಹು ವಿಶೇಷತೆಯನ್ನು ನಮಗೆ ತಿಳಿಸಿಕೊಡುತ್ತದೆ. ಹಲವಾರು ವಿಷಯ–ವಿಚಾರಗಳು ನಮ್ಮಲ್ಲಿ ಏನೇ ಬೇಧ–ಭಾವಗಳಿದ್ದರೂ ಮೊಹರಂ ಆಚರಣೆಯ ವಿಚಾರಕ್ಕೆ ಬಂದರೆ ಅದರಲ್ಲೂ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಬಹಳ ವಿಜೃಂಭಣೆಯಿಂದ ಮತ–ಬೇಧ–ಭಾವ ಮರೆತು ಒಂದಾಗಿ ಆಚರಿಸುತ್ತಾರೆ. ಅನೇಕ ಪರಕೀಯರ ದಾಳಿಯಿಂದ ಈ ನೆಲ ನಲುಗಿದರೂ ಬ್ರಿಟಿಷರು ನಿಜಾಮರ ದಬ್ಬಾಳಿಕೆ ನಮ್ಮ ನೆಲದ ಸಂಸ್ಕೃತಿಗೆ ಧಕ್ಕೆ ತಂದರೂ ನಮ್ಮ ಆಚಾರಣೆಗಳು ಹಾಗೆಯೇ ಮುಂದುವರೆದಿವೆ. ಅದರಲ್ಲೂ ಹಿಂದೂ–ಮುಸ್ಲಿಂರು ಸಹೋದರರಂತೆ ಬದುಕಿ ಭಾರತದ ಏಕತೆ–ಐಕ್ಯತೆಗೆ ಯಾವುದೇ ಧಕ್ಕೆ ಬರದೆ ಇರುವ ರೀತಿಯಲ್ಲಿ ಬಾಳುತ್ತಿರುವುದನ್ನು ಕಾಣುತ್ತೇವೆ.

ಸೂಫಿ– ಸಂತರ ಶರಣರ ನಾಡಾದ ಕಲಬುರಗಿ'ಯಲ್ಲಿ ಮೊಹರಂ ಹಬ್ಬದ ಆಚರಣೆ ಬಲು ವಿಶಿಷ್ಟ ಏಕೆಂದರೆ ಮೊಹರಂ ಗುದ್ದಲಿ ಬೀಳುವುದರಿಂದ ಪ್ರಾರಂಭವಾಗುತ್ತದೆ. ಹಿಜರಿ ಸನ್ ಅಮವಾಸ್ಯೆಯ ಚಂದ್ರನ ದರ್ಶನದೊಂದಿಗೆ ಆಚರಣೆ ಪ್ರಾರಂಭಮಾಡುವರು ಅಂದಿನ ದಿನದಿಂದ ಆಲಾವಿ ಕುಣಿತ, ಅದರೊಂದಿಗೆ ಮೊಹರಂ ಹಾಡುಗಳು ಹೆಣ್ಣು ಮಕ್ಕಳು ಸಹ ಪಾಲ್ಗೊಂಡು ಅನೇಕ ವಿಷಯಗಳ ಕುರಿತಾದ ಮೊಹರಂ ಹಾಡುಗಳನ್ನು ಹಾಡುವುದರ ಮೂಲಕ ತಮ್ಮ ಭಕ್ತಿ–ಭಾವ ರೀತಿ–ನೀತಿ ಮೊಹರಂ ಆಚರಣೆಯ ಮಹತ್ವ ಒಂದಾಗಿ ಜಾತಿ–ಮತ ಬೇಧ–ಭಾವ ಮರೆತು ಬಾಳುವ ರೀತಿ–ನೀತಿ ಎಲ್ಲವೂ ಒಳಗೊಂಡು 10ನೇ ದಿನದಂದು ಎಲ್ಲರು ದೇವರನ್ನು ಮಸೀದಿಯಿಂದ ಬೀಳ್ಕೊಡುವುದರೊಂದಿಗೆ ಹಬ್ಬ ಸಂಪನ್ನಗೊಳ್ಳುತ್ತದೆ. ಮೊಹರಂ ಆಚರಣೆಯಲ್ಲಿ ಪರಧರ್ಮ ಸಹಿಷ್ಣುತೆ ನಿತ್ಯ ಒಂದೊಂದು ದೇವರ ಸವಾರಿ ಭಕ್ತರ ಪಾಲ್ಗೊಳ್ಳುವಿಕೆ ನೈವೇದ್ಯ, ಪ್ರಸಾದ ಹೊಸ ಬಟ್ಟೆ ಉಟ್ಟು ಸಂಭ್ರಮಗೊಳ್ಳುವ ಕೋಟಿ–ಕಷ್ಟಗಳು ತೀರಿಹೋಗಲಿ ಎಂದು ಹರಕೆ–ಕಟ್ಟಿಕೊಳ್ಳುವ ಭಕ್ತರು ಈ ಪವಿತ್ರ ದಿನದಂದು ದೇವರಿಗೆ ಹರಕೆ ತೀರಿಸುತ್ತಾರೆ.

ದುಡಿಯಲು ನಗರ–ಪ್ರದೇಶಗಳಿಗೆ ಹೋದ ಜನ ಮೊಹರಂ ಹಬ್ಬಕ್ಕೆ ತಮ್ಮೂರಿಗೆ ಬಂದು ಎಲ್ಲಾ ಮತ ಧರ್ಮದವರು ತಮ್ಮ ಹರಕೆ ತೀರಿಸಿ ಬಂಧು–ಬಾಂಧವರೊಂದಿಗೆ ಬೆರೆತು ಸಂತಸಗೊಳ್ಳುತ್ತಾರೆ. ಸಾಂಸ್ಕೃತಿಕ ಮೌಲ್ಯಗಳ ಜೀವಂತಿಕೆಯೂ ಸಹ ಮೊಹರಂ ಪದಗಳಲ್ಲಿ ಕಾಣುತ್ತೇವೆ. ಸಂಸ್ಕೃತಿ ನಿಂತ ನೀರಲ್ಲ ಆಚರಣೆಯ ರೀತಿ ನೀತಿಗಳು, ವೇಷಭೂಷಣಗಳು ಬದಲಾಗಬಹುದು. ಆದರೆ ಆಂತರಿಕ ಮೌಲ್ಯಾಗಳು ಒಂದೇ ಆಗಿರುತ್ತವೆ. ಅದು ಮೌಲ್ಯಗಳ ಮುಂದುವರಿಕೆ ಅಪಮೌಲ್ಯಗಳ ಕ್ಷೀಣಿಸುವಿಕೆ ಎಂದೇ ಹೇಳಬಹುದು.

ಹಾಗಾಗಿ ಸಂಸ್ಕೃತಿಯೂ ನೆಲಮೂಲದ ಜಲಮೂಲವಾಗಿರದೇ ಪ್ರಕೃತಿಯ ನಿರ್ಮಿತ ಕೆಲವೊಂದು ಸಾಂಸ್ಕೃತಿಕ ವಿಭಿನ್ನತೆ ಮರೆಯುವ ಹಾಗಿಲ್ಲ. ಏಕೆಂದರೆ ನಮ್ಮದಲ್ಲದ ಆಚರಣೆಗಳು ನಮ್ಮದೇ ಸಂಸ್ಕೃತಿಯ ಪರಂಪರೆಯ ಪ್ರತೀಕವೆಂದು ಭಾವಿಸಿ ಜನವರ್ಗ ಎಲ್ಲಾ ಸಂಸ್ಕೃತಿಗಳಲ್ಲಿ ಬೆರೆಯುವುದು ನಿಜಕ್ಕೂ ಅಚ್ಚರಿವುಂಟುಮಾಡುತ್ತದೆ.

ಪರಂಪರೆಯ ಮೌಲ್ಯಗಳನ್ನು ಹೊಸ ತಲೆಮಾರಿಗೆ ಪರಿಚಯಿಸುವ ಕ್ರಮ ನಾವಿಲ್ಲಿ ಕಾಣುತ್ತೇವೆ. ಜಗತ್ತು ಎಷ್ಟೇ ವೇಗದಲ್ಲಿ ಬದಲಾದರು ಸಾಂಸ್ಕೃತಿಕ ಆಚರಣೆ ಮತ್ತೆ ಮತ್ತೆ ಐಕ್ಯತೆ ಭಾವೈಕ್ಯತೆಯ ಕಡೆ ನಮ್ಮ ತನು, ಮನ ಕೇಂದ್ರಿಕರಿಸುವಂತೆ ಮಾಡುತ್ತವೆ. ಎಷ್ಟೋ ಊರುಗಳಲ್ಲಿ ಕೇರಿಗಳಲ್ಲಿ ಎಲ್ಲಾ ಜನವರ್ಗಗಳು

ಎಲ್ಲವನ್ನು ಮರೆತು ಮೊಹರಂ ಆಚರಣೆಯ ವಿಧಿ ವಿಧಾನಗಳು ಒಂದಾಗಿ ಬೆರೆತು ಆಚರಿಸುವುದೇ ಸಾಂಸ್ಕೃತಿಕ ಜೀವಂತಿಕೆಯ ಮೌಲ್ಯಗಳನ್ನು ಪುನರುಚ್ಚರಿಸುತ್ತದೆ.

ಒಟ್ಟಾರೆ ಈ ಕಲಬುರಗಿಯ ವಿಭಾಗದ ಮೊಹರಂ ಆಚರಣೆ ಬಲುವಿಶಿಷ್ಟವಾಗಿದೆ ಎಂದೇ ಹೇಳಬೇಕು. ಈ ವಿಭಾಗದ ಕಲಬುರಗಿ ಜಿಲ್ಲೆಯದ್ಯಂತ ಬಹು ವಿಶೇಷವಾಗಿ ಈ ಮೊಹರಂ ಹಬ್ಬ ಆಚರಿಸುವುದನ್ನು ನಾವು ಕಾಣುತ್ತೇವೆ. ಯಾವುದೇ ಬೇಧ–ಭಾವ ಇರದೆ ಎಲ್ಲಾ ಮತ–ಧರ್ಮಿಯರು ಈ ಹಬ್ಬ ಆಚಾರಿಸುವುದುರಿಂದ ಮೊಹರಂ ಆಚರಣೆಯಲ್ಲಿ ಧಾರ್ಮಿಕ ಸಹಿಷ್ಣುತೆ ಇರುವುದನ್ನು ಕಾಣುತ್ತೇವೆ. ಧಾರ್ಮಿಕ ಸಹಿಷ್ಣುತೆ ಅದರಲ್ಲೂ ಪರಧರ್ಮ ಸಹಿಷ್ಣುತೆ ಇದ್ದಾಗ ರಾಜ್ಯದ, ದೇಶದ, ವಿಶ್ವದ ಏಳಿಗೆ ಸಾಧ್ಯವಾಗುತ್ತದೆ. ಆಚರಣೆಗಳು ನಮ್ಮ ಮನವನ್ನು ಶುದ್ಧಗೊಳಿಸುತ್ತವೆ. ಸಂಸ್ಕೃತಿಯ ಪ್ರತಿಬಿಂಬಗಳು ಈ ಆಚರಣೆಗಳಾದರೆ ಐಕ್ಯತೆ–ಅವುಗಳ ಮುಖ್ಯ ಧ್ಯೇಯವಾಗಬೇಕು ಭಾವೈಕ್ಯತೆ ಜೀವ ಸಂಜೀವಿನಿಯಾಗಬೇಕು, ಎನ್ನುವುದು ಈ ಲೇಖನದ ಆಶಯ.

**ಪರಾಮರ್ಶನ ಗ್ರಂಥಗಳು**


- ಬಸವರಾಜ ಪೋಲಿಸ್ ಪಾಟೀಲ್. (2015). *ರಿವಾಯತ್ ಹಾಡುಗಳು.* ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ.
- ಬಸವಂತರಾವ್ ರೋಂಪಳ್ಳಿ. (2019). *ಪ್ರಸಿದ್ಧ ಮೊಹರಂ ಪದಗಳು.* ಗುರುಪ್ರಕಾಶನ.
- ಬೋರಲಿಂಗಯ್ಯ. ಹಿ.ಚಿ. (1996). *ಕರ್ನಾಟಕ ಜನಪದ ಕಲೆಗಳ ಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಚನ್ನಣ್ಣ ವಾಲೀಕರ್. (1982). *ಗುಲಬರ್ಗಾ ಜಿಲ್ಲೆಯ ಮೊಹರಂ ಪದಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಮಹಮ್ಮದ್ ಅಬ್ದುಲ್ ಅನ್ಸಾರಿ. (2013). *ರಾಷ್ಟ್ರೀಯ ಭಾವೈಕ್ಯತೆ.* ಶಾಂತಿ ಪ್ರಕಾಶನ.
- ಫಕೀರ್ ಮಹ್ಮದ್ ಕಟ್ಪಾಡಿ. (2017). *ಉತ್ತರ ಕರ್ನಾಟಕದ ಸೂಫಿ ಸಂತರು.* ನ್ಯಾಶನಲ್ ಬುಕ್ ಟ್ರಸ್ಟ್.
- ಫಾಲಾಕ್ಷ. (2014). *ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ.* ಎಸ್.ಎಸ್. ಭಾವಿಕಟ್ಟಿ ಪ್ರಕಾಶನ.
- ರಹಮತ್ ತರೀಕೆರಿ. (2004). *ಸಾಂಸ್ಕೃತಿಕ ಅಧ್ಯಯನ.* ಅಭಿನವ ಪ್ರಕಾಶನ.